ರಾಜ್ಯದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಮೇಲೆ ಮಾರಾಟ ತೆರಿಗೆ

115 (393) ಶ್ರೀ ಸಿ,ಎರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಂಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಮಾರಾಟದ ಮೇಲೆ ವಿಧಿಸುತ್ತಿರುವ ಮಾರಾಟ ತೆರಿಗೆಯಿಂದ ಪ್ರತಿ ವರ್ಷ ಸಂಗ್ರವಾಗುತ್ತಿರುವ ಹಣ ಎಷ್ಟು (ಕಳೆದ 3 ವರ್ಷಗಳ ವಿವರವನ್ನು ವರ್ಷವಾರು ನೀಡುವುದು)

ಆ. ಕೊಲ್ಲಿ ಯುದ್ದಿ ಭೀತಿ ಹಿನ್ನಲೆಯಲ್ಲಿ ಮಾರಾಟ ತೆರಿಗೆಯಿಂದ ವಿನಾಯಿತಿ ನೀಡುವ ಬಗ್ಗೆ ಸರ್ಕಾರದ ನಿಲುವೇನು.

ಇ. ಸಂಗ್ರಹವಾಗಿರುವ ಮಾರಾಟ ತೆರಿಗೆ ಹಣವನ್ನು ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗುವುದು?

ಶ್ರೀ ಎಸ್. ಎಂ.ಕೃಷ್ಣ (ಮುಖ್ಯ ಮಂತ್ರಿಗಳು)

ಅ. ವರ್ಷ ಮಾರಾಟ ತೆರಿಗೆ

	ಪೆಟ್ರೋಲ್	ಡೀಸೆಲ್	ಒಟ್ಟು
		(ರೂ.ಕೋಟಿಗಳಲ್ಲಿ)	
99-2000	433.52	639.45	1072.97
2000-01	514.14	748.76	1262.90
2001-02	512.98	675.98	1188.96

ಆ. ಅಂತಹ ಯಾವುದೇ ಪ್ರಸ್ತಾಪನೆ ಸರ್ಕಾರದ ಮುಂದೆ ಇರುವುದಿಲ್ಲ.

ಇ. ರಾಜ್ಯದ ಅಭಿವೃದ್ದಿ ಕಾರ್ಯಗಳಿಗಾಗಿ ಬಳಸಿಕೊಳ್ಳಲಾಗುವುದು.

ರಸ್ತೆ ಅಪಘಾತ ತಡೆಗಟ್ಟುವಿಕೆ

116(395) ಶ್ರೀ ಎರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ನಡೆದ ರಸ್ತೆ ಅಪಘಾತಗಳ ಸಂಖ್ಯೆ ಎಷ್ಟು;

ಆ. ಈ ಅಪಘಾತಗಳಲ್ಲಿ ಮೃತಪಟ್ಟಿರುವವರ ಸಂಖ್ಯೆ ಎಷ್ಟು (ವರ್ಷವಾರು ಮಾಹಿತಿ ನೀಡುವುದು);

ಇ. ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ;

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ. 2000ನೇ ವರ್ಷದಲ್ಲಿ 31302,
2001ನೇ ವರ್ಷದಲ್ಲಿ 33000.
2002ನೇ ವರ್ಷದಲ್ಲಿ 35784.

ಆ. 2000ನೇ ಸಾಲಿನಲ್ಲಿ 5649,
2001ನೇ ಸಾಲಿನಲ್ಲಿ 5805,
2002ನೇ ಸಾಲಿನಲ್ಲಿ 6366 ಜನ ಮೃತಪಟ್ಟಿರುತ್ತಾರೆ.

೩. ಅಪಘಾತಗಳನ್ನು ತಡೆಗಟ್ಟಲು ಸರ್ಕಾರವು ರಸ್ತೆ ಸುರಕ್ಷತಾ ಸಮಿತಿಗಳನ್ನು ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ರಚಿಸಲಾಗಿದೆ. ಕೇಂದ್ರ ಸರ್ಕಾರವು ಸರ್ಕಾರೇತರ ಸಂಘ ಸಂಸ್ಥೆಗಳಿಗೆ ಪ್ರತಿ ವರ್ಷ ರಸ್ತೆ ಸುರಕ್ಷತಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಅನುದಾನ ನೀಡುತ್ತಿದೆ. ರಾಜ್ಯದಲ್ಲಿನ ರಸ್ತೆ ಸುರಕ್ಷತಾ ಸಮಿತಿಗಳಿಗೆ ಸರ್ಕಾರವು ಪ್ರತಿವರ್ಷ ಅನುದಾನ ನೀಡುತ್ತಿದ್ದು, ಈ ಕೆಳಕಂಡ ರಸ್ತೆ ಸುರಕ್ಷತೆ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ:

1. ಮೇಲುಸೇತುವೆ ಬೈಪಾಸ್ ರಸ್ತೆಗಳ ನಿರ್ಮಾಣ;

2. ಅಪಘಾತ ಸ್ಥಳಗಳನ್ನು ಗುರುತಿಸಿ ದೋಷಗಳನ್ನು ಸರಿಪಡಿಸುವುದು ಮತ್ತು ರಸ್ತೆಗಳ ಅಗಲೀಕರಣ:

3. ವಾಹನಗಳ ಮಾಲೀಕರು ಮತ್ತು ಚಾಲಕರಿಗೆ ಹಾಗೂ ಶಾಲಾ ಕಾಲೇಜುಗಳಲ್ಲಿ ರಸ್ತೆ ಸುರಕ್ಷತೆ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ;

4. ರಸ್ತೆಗಳಲ್ಲಿ ಸಂಚಾರಿ ಫಲಕಗಳನ್ನು ಅಳವಡಿಸುವುದು;

5. ಟ್ರಾಫಿಕ್ ಸಿಗ್ನಲ್‌ಗಳ ನಿರ್ವಹಣೆಯನ್ನು ಅಭಿವೃದ್ದಿಪಡಿಸುವುದು;

6. ಸುಗಮ ಸಂಚಾರಕ್ಕೆ ಮರಗಳನ್ನು ತೆಗೆಸುವುದು;

7. ಪಾದಚಾರಿಗಳಿಗೆ ಹಾಗೂ ಸುಗಮ ಸಂಚಾರಕ್ಕೆ ಅಡಚಣೆ ಮಾಡುವ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವುದು ಮತ್ತು ಅನಧಿಕೃತವಾಗಿ ಪುಟ್‌ಪಾತ್‌ಗಳನ್ನು ಆವರಿಸಿಕೊಂಡಿರುವುದನ್ನು ತೆರವುಗೊಳಿಸುವುದು;

8. ರಸ್ತೆ ಗುಂಡಿಗಳನ್ನು ಮುಚ್ಚಿಸುವುದು;

9. ಮಾರಣಾಂತಿಕ ಅಪಘಾತ ಮಾಡಿದ ಚಾಲಕರ ಚಾಲನಾ ಪರವಾನಿಗೆಯನ್ನು ಅಮಾನತ್ತು ಅಥವಾ ರದ್ದುಪಡಿಸುವುದು;

10. ಅಧಿಕ ಹೇರು ಭಾರ ಕೊಂಡೊಯ್ಯುವ ಹಾಗೂ ಹೆಚ್ಚು ಪ್ರಯಾಣಿಕರನ್ನು ಸಾಗಿಸುತ್ತಿರುವ ವಾಹನಗಳ ಮೇಲೆ ಮತ್ತು ಕುಡಿದು ಚಾಲನೆ ಮಾಡುವ ಚಾಲಕರ ಮೇಲೆ ಪ್ರಕರಣಗಳನ್ನು ದಾಖಲಿಸಲಾಗುತ್ತಿದೆ.

ಮಂಡ್ಯದಲ್ಲಿ ಕಾವೇರಿ ಸಾರಿಗೆ ವ್ಯವಸ್ಥೆಯ ಪುನರಂಭ

117(173) ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ) :ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ಮಂಡ್ಯದಲ್ಲಿ ಕಾವೇರಿ ಸಾರಿಗೆ ವ್ಯವಸ್ಥೆಯನ್ನು ಪ್ರಾರಂಭಿಸಲಾಗಿತ್ತೆ

ಆ. ಹಾಗಿದ್ದಲ್ಲಿ ಆರಂಭಿಸಿದ ಕಾವೇರಿ ಸಾರಿಗೆವ್ಯವಸ್ಥೆ ಪ್ರಸ್ತುತ ಸ್ಥಗಿತಗೊಂಡಿರುವುದಕ್ಕೆ ಕಾರಣಗಳೇನು?